

ವಸುಧಾ ಬಂದಾಗ ಹನ್ನೆರಡು ಗಂಟೆ ದಾಟಿತ್ತು. ಬಂದ ಕೂಡಲೇ 'ಅಮ್ಮ ಊಟ ಹಾಕು' ಎಂದಳು.

ತಾಯಿ–ಮಗಳು ಒಟ್ಟಿಗೆ ಕುಳಿತು ಊಟ ಮಾಡಿದರು. ಮಗಳು ಯಾಕೋ ಸೊರಗಿರುವಂತೆ ರಕ್ಮಾಗೆ ತೋರಿತು.

'ಯಾಕೆ ವಸು ಹೀಗಾಗಿದ್ದೀಯ? ಹುಷಾರಿಲ್ವಾ?'

ಅವಳು ತಾಯಿಯ ತೊಡೆಯ ಮೇಲೆ ತಲೆಯಿಟ್ಟು ಬಿಕ್ಕಿಬಿಕ್ಕಿ ಅತ್ತಳು.

'ಯಾಕಮ್ಮಾ ಅಳ್ತಿದ್ದೀಯ? ಏನಾಯ್ತು?'

'ಅಮ್ಮ, ನೀನು ನನ್ನನ್ನು ಬೆಳೆಸಿದ ರೀತಿ ನಾನು ನನ್ನ ಮಗಳನ್ನು ಬೆಳೆಸಲಿಲ್ಲಮ್ಮ. ಈಗ ತುಂಬಾ ಪ್ರಾಬ್ಲಂ ಆಗಿದೆ.'

'ಏನಾಯ್ತು ವಸು?'

'ನೀನು ನನ್ನ ಮಗಳ ಬಗ್ಗೆ ಹೇಳಿದಾಗಲೂ ನಾನು ಸೀರಿಯಸ್ ಆಗಿ ತೆಗೆದುಕೊಳ್ಳಲಿಲ್ಲ. ಈಗ ಅನುಭವಿಸ್ತಿದ್ದೀನಿ.'

'ನೀನು ಹೀಗೆ ಒಗಟಿನಲ್ಲಿ ಮಾತಾಡಿದರೆ ನಾನು ಏನರ್ಥಮಾಡಿಕೊಳ್ಳಲಿ? ಬಿಡಿಸಿ ಹೇಳಮ್ಮ...'

'ಅಮ್ಮಾ, ತನ್ವಿಗೆ ಈಗ ಐದು ತಿಂಗಳು. ಅವಳ ಕಾಲೇಜು ಹುಡುಗನಂತೆ, ತುಂಬಾ ಶ್ರೀಮಂತ. ಮಂಗಳೂರು ಹುಡುಗ...'

'ಅಯ್ಯೋ ದೇವರೆ, ಅವಳಿಗೆ ಐದು ತಿಂಗಳಾಗುವವರೆಗೂ ಏನೇ ಮಾಡ್ತಿದ್ದೆ?'

'ಗೊತ್ತಾಗಲಿಲ್ಲಮ್ಮ. ಈಗಿನ ಕಾಲದ ಹುಡುಗಿಯರು ಬೋಲ್ಡ್ ಆಗಿ ಹುಡುಗರ ಜೊತೆ ಸುತ್ತಾಡ್ತಾರೇಂತ ಅಂದುಕೊಂಡಿದ್ದೆ. ಇದ್ದಕ್ಕಿದ್ದಂತೆ ಒಂದು ದಿನ ಅವಳೇ ಹೇಳಿದಳು.'

'ಹೌದೇನೆ? ಮೊದಲು ಆ ಹುಡುಗನಿಗೆ ಹೇಳಿ ಕಳುಹಿಸಿ ಮದುವೆ ಮಾಡು. ಅವನ ತಂದೆ–ತಾಯಿಯರನ್ನು ಭೇಟಿ ಮಾಡು...'

'ಇಲ್ಲಮ್ಮ, ಅದು ಅಷ್ಟು ಸುಲಭವಲ್ಲ...'

'ಯಾಕೆ?'

'ಆ ಹುಡುಗನ್ನ ನಾನೇ ಮೀಟ್ ಮಾಡಿದ್ದೆ. ಅವನು ಇವಳನ್ನು ಮದುವೆಯಾಗಲು ಸಿದ್ಧವಾಗಿಲ್ಲ.'

'ಯಾಕೆ?'

'ಅವನು ಇವಳ ಸ್ನೇಹ ಮಾಡುವಾಗಲೇ ಹೇಳಿದ್ದನಂತೆ. ನಾನು ಲೈಫ್ ಇರೋದು ಎಂಜಾಯ್ ಮಾಡಕ್ಕೆ ಅಂತ ನಂಬಿರುವವನು. ನಾನು ಯಾವ ಕಾರಣಕ್ಕೂ ಮದುವೆಯಾಗಲ್ಲಾಂತ.'

'ಹೌದಾ? ನಿನ್ನ ಮಗಳು ಈಗ ಏನಂತಾಳೆ?'

'ಅವನು ಒಪ್ಪಿದರೂ ನಾನು ಮದುವೆಯಾಗಲ್ಲ. ನನಗೆ ಮದುವೆ ಬೇಡ ಅಂತಿದ್ದಾಳೆ.'

'ಯಾಕೆ ಮದುವೆ ಬೇಡವಂತೆ?'

'ಅವಳಿಗೆ ಫಾರಿನ್ ಹುಡುಗ ಬೇಕಂತೆ. ನಾನು ಅಬಾರ್ಷನ್ ಮಾಡಿಸೋಣಾಂತ ನನ್ನ ಪರಿಚಯದ ಡಾಕ್ಟರ್ ಹತ್ತಿರ ಕರ್ಕೊಂಡು ಹೋಗಿದ್ದೆ. ಅವರು ಐದು ತಿಂಗಳಾಗಿದೆ. ಅಬಾರ್ಷನ್ ಮಾಡಕ್ಕಾಗಲ್ಲ ಅಂದ್ರು.'

'ಹಾಗಾದರೆ ಮಗು...'

'ಅಮ್ಮಾ, ನನ್ನ ಪರಿಚಯದವರು ಡಾಕ್ಟರ್ ಚೆನ್ನೈನಲ್ಲಿದ್ದಾರೆ. ಅವರ ಮನೆ ಔಟ್‌ಹೌಸ್‌ನಲ್ಲಿ ತನ್ವಿ ಇರ್ತಾಳೆ. ಅಡುಗೆಯವರು, ಕೆಲಸದವರನ್ನು ಗೊತ್ತು ಮಾಡಿಕೊಡ್ತೀನಿ. ನೀನು ಅವಳಿಗೆ ಡೆಲಿವರಿ ಆಗುವವರೆಗೂ ಅವಳ ಜೊತೆ ಇರಬೇಕು, ಆಗಲ್ಲ ಅನ್ನಬೇಡ.'

'ಭಾಷೆ ಬರದ ಊರಿನಲ್ಲಿ ನಾನು ಹೇಗಿರಲೆ?'

'ಅವರು ಕನ್ನಡದವರೇ ಆದ್ದರಿಂದ ನಿನಗೆ ತೊಂದರೆಯಾಗಲ್ಲ. ಇಲ್ಲಿ ನೀನು ವಿವೇಕ್ ಮನೆಗೆ ಹೋಗ್ತಿದ್ದೀನೀಂತ ಹೇಳು.'

'ನನಗೆ ಯೋಚಿಸಕ್ಕೆ ಕೊಂಚ ಟೈಂ ಕೊಡಮ್ಮ.'

'ಇಲ್ಲಮ್ಮ, ನೀನು ಹೋಗಲೇಬೇಕು. ನಮಗೆ ಇನ್ನಾರು ಸಹಾಯ ಮಾಡ್ತಾರೆ ಹೇಳು' ಎಂದು ತಾಯಿಯನ್ನಪ್ಪಿ ಅತ್ತಳು ವಸುಧಾ. ರಕ್ಮಾ ಒಲ್ಲದ ಮನಸ್ಸಿನಿಂದ ಒಪ್ಪಿದರು.

'ಮುಂದಿನ ತಿಂಗಳ ಮೊದಲ ವಾರದಲ್ಲಿ ಹೋಗಬೇಕಾಗಬಹುದು' ಎಂದಳು ವಸುಧಾ.

ರಕ್ಮಾ ತಾನು ಮಗನ ಮನೆಗೆ ಹೋಗುತ್ತೇನೆಂದು ಯಾರಿಗೂ ಹೇಳಲಿಲ್ಲ. ತನ್ವಿಯ ಮಗುವಿನ ಬಗ್ಗೆ ಯೋಚಿಸಿ ವ್ಯಥೆಪಟ್ಟರು. ತಂದೆ ತಾಯಿಯಿದ್ದೂ ಆ ಮಗು ಅನಾಥವಾಗಿ ಬೆಳೆಯಬೇಕೆ? ಯಾರ ಬಳಿ ನನ್ನ ನೋವು ಹೇಳಿಕೊಳ್ಳಲಿ?

ಅವರಿಗೆ ಗಂಡ ನೆನಪಾದರು. ಇಂತಹ ವಿಚಾರಗಳನ್ನು ಅವರಿಗೆ ಮಾತ್ರ ಹೇಳಲು ಸಾಧ್ಯ? ಆದರೆ ಅವರಿಲ್ಲವೆ? ಅವರ ಹೊಟ್ಟೆಯಲ್ಲಿ ಏನೋ ಸಂಕಟ! ಎದೆಯಲ್ಲಿ ಏನೋ ತಳಮಳ! ಅವರು ಗಂಡನ ಭಾವಚಿತ್ರದ ಎದುರು ಕುಳಿತು ಕಂಬನಿ ಸುರಿಸಿದರು.

ವಾರ ಕಳೆಯಿತು. ಹೊಸ ತಿಂಗಳು ಆರಂಭವಾಗಲು ಎರಡು ದಿನಗಳಿದ್ದವು. ಅವರು ಬಟ್ಟೆ ಒಗೆಸಿ ಜೋಡಿಸಿಟ್ಟುಕೊಂಡರು. ಒಂದು ಸಾಯಂಕಾಲ ವಸುಧಾ ಫೋನ್ ಮಾಡಿದಳು.

'ಅಮ್ಮಾ, ಒಂದು ವಿಷಯ ಹೇಳಬೇಕಿತ್ತು...'

'ಹೇಳಮ್ಮ.'

'ನೆನ್ನೆ ಬೇಡಾಂತ ಹೇಳಿದರೂ ಕೇಳದೆ ತನ್ವಿ ಕಾರು ತೊಗೊಂಡು ಫ್ರೆಂಡ್ಸ್ ಜೊತೆ ನಂದಿಬೆಟ್ಟಕ್ಕೆ ಹೋಗಿದ್ದಳು. ಕಾರು ಆಕ್ಸಿಡೆಂಟಾಗಿ ತನ್ವಿಗೆ ತುಂಬಾ ಪೆಟ್ಟಾಗಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಳು.'

'ಈಗ ಹೇಗಿದ್ದಾಳೆ?'

'ಹುಷಾರಾಗಿದ್ದಾಳೆ. ಆದರೆ ಅವಳ ಗರ್ಭಕೋಶಕ್ಕೆ ಏಟು ಬಿದ್ದಿದ್ದರಿಂದ ಮಗೂನೂ ಹೋಗಿ ಬಿಡ್ತು. ಗರ್ಭಕೋಶಾನೂ ತೆಗೀಬೇಕಾಯ್ತು.'

'ಅಯ್ಯೋ ದೇವರೆ...'

'ಒಂದು ರೀತಿಯಲ್ಲಿ ಆಗಿದ್ದೆಲ್ಲಾ ಒಳ್ಳೆಯದಕ್ಕೆ ಅಂದುಕೊಳ್ಳಬೇಕಷ್ಟೆ. ನಿನ್ನ ಪಾಡಿಗೆ ನೀನು ಆರಾಮವಾಗಿ ಕೆಂಗೇರಿಯಲ್ಲಿರಬಹುದು. ತನ್ವಿ ಈ ವರ್ಷ ಕಾಲೇಜಿಗೆ ಹೋಗಲ್ಲ...'

'ಸರಿಯಮ್ಮ' ಎಂದರು.

* * *

ವರ್ಷ ಉರುಳಿತು. ಒಂದು ಭಾನುವಾರ ಬೆಳಿಗ್ಗೆ ರಕ್ಮಾ ತಿಂಡಿ ತಿಂದು ಕಟ್ಟೆಯ ಮೇಲೆ ಕುಳಿತಿದ್ದಾಗ ವಸುಧಾ, ಗಂಡನ ಜೊತೆ ಬಂದಳು.

'ಇದೇನೇ ವಸುಧಾ ಬರುವ ವಿಚಾರ ಫೋನ್ ಮಾಡಬಾರದಿತ್ತಾ?'

'ಅಷ್ಟು ಬಿಡುವಿರಲಿಲ್ಲಮ್ಮ, ಒಳಗೆ ಹೋಗೋಣ ಬಾ.'

ರಕ್ಮಾ ಒಳಗೆ ನಡೆದರು. ಗಂಡ–ಹೆಂಡತಿ ಹಾಲ್‌ನಲ್ಲಿ ಕುಳಿತರು.

'ಅಮ್ಮಾ, ತನ್ವಿ ಮದುವೆ ಸೆಟ್ಲ್ ಆಯ್ತು. ಮುಂದಿನ ವಾರವೇ ಮದುವೆ...'

'ಮದುವೇನಾ?'

'ಹುಂ. ಹುಡುಗ ಅಮೆರಿಕದಲ್ಲಿ ಬಿಸಿನೆಸ್‌ಮ್ಯಾನ್. ತುಂಬಾ ಶ್ರೀಮಂತರು. ತನ್ವಿ ಓದುವ, ಕೆಲಸಕ್ಕೆ ಸೇರುವ ಅವಶ್ಯಕತೆಯೇ ಇಲ್ಲ.'

ಸುದ್ದಿ ಕೇಳಿ ಸಂತೋಷಪಡಬೇಕೋ, ದುಃಖಪಡಬೇಕೋ ರಕ್ಮಾಗೆ ಗೊತ್ತಾಗಲಿಲ್ಲ.

ಗಂಡ–ಹೆಂಡತಿ ಲಗ್ನಪತ್ರಿಕೆ ಕೊಟ್ಟು ನಮಸ್ಕಾರ ಮಾಡಿದರು.

'ಅಮ್ಮಾ, ಖಂಡಿತಾ ಎರಡು ದಿನ ಮೊದಲು ಮದುವೆಗೆ ಬರಬೇಕು. ವಿವೇಕ್ ಒಂದು ವಾರ ಮೊದಲೇ ಬರ್ತಾನಂತೆ.'

'ಒಳ್ಳೆಯದಾಯ್ತು. ಕುಡಿಯಕ್ಕೆ ಏನು ಕೊಡಲಿ?'

'ಮಜ್ಜಿಗೆ ಕೊಡು. ನಿನ್ನ ಸ್ಪೆಷಲ್ ಮಜ್ಜಿಗೆ ನಮಗೆ ತುಂಬಾ ಇಷ್ಟ.'

ರಕ್ಮಾ ಅಡುಗೆ ಮನೆಗೆ ನಡೆದರು. ಹಿಂದೆಯೇ ಬಂದ ವಸುಧಾ ತಾಯಿಯ ಕೊರಳನ್ನಪ್ಪಿ ಹೇಳಿದಳು. 'ನೀನು ಏನು ಯೋಚಿಸ್ತಿದ್ದೀಯಾಂತ ನನಗೆ ಗೊತ್ತು. ಹುಡುಗನಿಗೆ ಮದುವೆ ಮಾಡಿಕೊಳ್ಳಲು ಇಷ್ಟವಂತೆ. ಆದರೆ ಮಕ್ಕಳು ಬೇಡವಂತೆ. ತನ್ವಿ ಅವನ ಕಂಡಿಷನ್‌ಗೆ ಒಪ್ಪಿದ್ದರಿಂದ ಈ ಮದುವೆ ನಡೆಯುತ್ತಿರುವುದು...'

'ಹೀಗೂ ಉಂಟೆ?' ಎಂದುಕೊಂಡರು ರಕ್ಮಾ.

'ಆಗೋದೆಲ್ಲಾ ಒಳ್ಳೆಯದಕ್ಕೇ ಅಲ್ವಾಮ್ಮ?'

ಮಗಳು ಖುಷಿಯಿಂದ ಪ್ರಶ್ನಿಸಿದಾಗ ರಕ್ಮಾ ಅರ್ಥಹೀನ ನಗೆ ಚೆಲ್ಲಿದರು.

ಪ್ರತಿಕ್ರಿಯಿಸಿ: **feedback@sudha.co.in**